**ಓ.ಎಸ್. ನಂಃ 244/2021**

**ಪಿ.ಡಬ್ಲ್ಯೂಃ 3**

**ದಿನಾಂಕ 08.07.2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ.ಜಿ.ಎಲ್.ಡಿ. ವಕೀಲರಿಂದಃ</u>**

1. ನಾನು 2011 ರಿಂದ ದಸ್ತಾವೇಜು ಬರಹಗಾರನಾಗಿ ಕೆಲಸ ಮಾಡುತ್ತಿದ್ದೇನೆ. ನನ್ನ ಪರವನಿಗೆ ಸಂಖ್ಯೆ 5/2011 ಅಂತ ಇರುತ್ತದೆ. 2020 ರಲ್ಲಿ ನನ್ನ ಪರವಾನಿಗೆಯು ನವೀಕರಣಗೊಂಡಿತ್ತು. 2020 ರಲ್ಲಿ ನನ್ನ ಪರವಾನಿಗೆ ನವೀಕರಣಗೊಡಿತ್ತು ಎಂದು ತೋರಿಸಲು ನನ್ನ ಪರವಾನಿಗೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಿಪಿ.5 ರ ದಾಖಲೆಯನ್ನು ಬರೆಯುವ ಕಾಲಕ್ಕೆ ನನ್ನ ಪರವಾನಿಗೆ ನವೀಕರಣಗೊಳ್ಳದಿದ್ದ ಕಾರಣ ನಿಪಿ.5 ರ ದಾಖಲೆಯು ಕಾನೂನಿನಡಿಯಲ್ಲಿ ಯಾವುದೇ ಮಾನ್ಯತೆ ಇರುವುದಿಲ್ಲ ಎಂದರೆ ಸರಿಯಲ್ಲ.

2. ವಾದಿ ನನ್ನನ್ನು ಸಾಕ್ಷಿ ನುಡಿಯಲು ನ್ಯಾಯಾಲಯಕ್ಕೆ ಕರೆದಿರುತ್ತಾರೆ ಎಂದರೆ ಸಾಕ್ಷಿಯು ವಾದಿ ಮತ್ತು ಪ್ರತಿವಾದಿ ಇಬ್ಬರು ಸಹ ನನ್ನನ್ನು ನ್ಯಾಯಾಲಯಕ್ಕೆ ಸಾಕ್ಷಿ ನುಡಿಯಲು ಕರೆದಿರುತ್ತಾರೆ ಎಂದು ನುಡಿದಿರುತ್ತಾರೆ. ಪ್ರತಿವಾದಿಯು ನನ್ನನ್ನು ಸಾಕ್ಷಿ ನುಡಿಯಲು ನ್ಯಾಯಾಲಯಕ್ಕೆ ಕರೆಯದಿದ್ದರು ಸಹ ಕರೆದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ಸುಮಾರು ವರ್ಷಗಳಿಂದ ನನಗೆ ವಾದಿಯ ಪರಿಚಯವಿದೆ. ವಾದಿಯು ನನ್ನ ಮೂಲಕ ಹಲವಾರು ಕ್ರಯದ ಕರಾರು ಪತ್ರಗಳನ್ನು ಬರೆಸಿರುವುದರಿಂದ ನನಗೆ ವಾದಿಯ ಪರಿಚಯ ಇದೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ವಾದಿ ಮತ್ತು ಪ್ರತಿವಾದಿ ಇಬ್ಬರು ಸಹ ನನ್ನೊಂದಿಗೆ ಹಲವಾರು ದಾಖಲೆಗಳನ್ನು ಬರೆಸಿರುತ್ತಾರೆ ಎಂದು ನುಡಿದಿರುತ್ತಾರೆ. ಪ್ರತಿವಾದಿ ನನ್ನೊಂದಿಗೆ ಹಲವಾರು ದಾಖಲೆಗಳನ್ನು ಬರೆಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ನನ್ನ ತಾತನಾದ ಎಸ್.ಕೆ.ರಾಮೇಗೌಡರು ಸಹ ಪತ್ರ ಬರಹಗಾರರು ಎಂದರೆ ಸರಿ. ನಾನು ಮತ್ತು ನನ್ನ ತಾತ ದಸ್ತಾವೇಜು ಬರಹಗಾರಾಗಿರುವುದರಿಂದ ಯಾವ ದಸ್ತಾವೇಜನ್ನು ತಾಯಾರಿಸಲು ಯಾವೆಲ್ಲಾ ದಾಖಲೆಗಳು ಎನ್ನುವ ಸಾಮಾನ್ಯ ಜ್ಞಾನ ನಮಗೆ ಇದೆ ಎಂದರೆ ಸರಿ. ಯಾವೆಲ್ಲಾ ದಸ್ತಾವೇಜುಗಳು ಕಡ್ಡಾಯ ನೋಂದಣಿ ಆಗಬೇಕು ಎನ್ನುವ ಜ್ಞಾನ ನನಗೆ ಇದೆ ಎಂದರೆ ಸರಿ. ಕ್ರಯದ ಕರಾರು ಪತ್ರ ಬರೆಸುವ ಪೂರ್ವದಲ್ಲಿ ಮಾರಾಟಗಾರನ ವಂಶವೃಕ್ಷವನ್ನು ನೋಡುತ್ತೇವೆ ಎಂದರೆ ಸರಿ. ನಾನು ನಿಪಿ.5 ರ ಕರಾರನ್ನು ತಯಾರಿಸುವ ಪೂರ್ವದಲ್ಲಿ ಪ್ರತಿವಾದಿಯ ವಂಶವೃಕ್ಷವನ್ನು ನೋಡಿರುತ್ತೇನೆ. ಸಾಕ್ಷಿಯು ಮುಂದುವರೆದು ದಾವಾ ಆಸ್ತಿಯ ಪ್ರತಿವಾದಿಯು ಸ್ವಯಾರ್ಜಿತ ಆಸ್ತಿಯಾಗಿತ್ತು ಎಂದು ಸ್ವತಃ ನುಡಿದಿರುತ್ತಾರೆ. ದಾವಾ ಆಸ್ತಿಯು ಪ್ರತಿವಾದಿಯ ಪಿತ್ರಾರ್ಜಿತ ಆಸ್ತಿಯಾಗಿರುವುದಿರಿಂದ ಅದನ್ನು ಮಾರಾಟ ಮಾಡಲು ಪ್ರತಿವಾದಿಗೆ ಯಾವುದೇ ಹಕ್ಕು ಇರಲಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ.

5. ಖಾಲಿ ಛಾಪಾ ಕಾಗದವನ್ನು ದುರುಪಯೋಗಪಡಿಸಿಕೊಂಡು ನಾನು ಮತ್ತು ಸಾಕ್ಷಿದಾರರು ವಾದಿಯೊಂದಿಗೆ ಶಾಮಿಲಾಗಿ ನಿಪಿ.5 ರ ಸುಳ್ಳು ದಾಖಲೆಯನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಮಾರಾಟ ಮಾಡಲು ವಾದಿ ಮತ್ತು ಪ್ರತಿವಾದಿಯ ಮಧ್ಯೆ ಯಾವುದೇ ಒಪ್ಪಂದ ವಾಗದಿದ್ದರು ಸಹ ನಾನು ವಾದಿಯೊಂದಿಗೆ ಸೇರಿ ಮೋಸದಿಂದ ನಿಪಿ.5 ರ ದಾಖಲೆಯನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**